ವಿಚಾರಪ್ರಭ

# ಜೀವನ ಮತ್ತು ಅದರ ಪರಮೋಚ್ಚ ಮೌಲ್ಯ

ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ

## ಜೀವನಕ್ಕೊಂದು ಮೌಲ್ಯ

**ಜೀ**ವನವು ಒಂದು ಪ್ರವಾಹ. ಇದು ಸತತವಾಗಿ ಪ್ರವಹಿಸುತ್ತಲೇ ಇರುತ್ತದೆ. ಸದಾ ಹರಿಯುತ್ತಿರುವ ನದೀನದಗಳ ಪ್ರವಾಹವು ಸಾಗರದಲ್ಲಿ ಅಂತ್ಯಗೊಳ್ಳುವಂತೆ, ಈ ಜೀವನಕ್ಕೂ ಒಂದು ಅಂತ್ಯವುಂಟು. ಮಳೆಗಾಲದಲ್ಲಿ ನದಿಯು ಎರಡು ದಡಗಳನ್ನು ತುಂಬಿ ಹರಿದರೂ ಕಟ್ಟಕಡೆಗೆ ಅದು ಸಮುದ್ರವನ್ನು ಸೇರಲೇಬೇಕು. ಅಲ್ಲಿಯವರೆಗೆ ನದಿಯಾಗಿದ್ದ ಆ ಪ್ರವಾಹವು ಸಮುದ್ರದಲ್ಲಿ ಸೇರಿ ಸಮುದ್ರವೇ ಆಗಿಬಿಡುತ್ತದೆ. ಹಾಗೆಯೇ ಮಾನವ ಜೀವನಕ್ಕೂ ಒಂದು ಗುರಿ, ಧ್ಯೇಯವಿದೆ, ಅದಕ್ಕೊಂದು ಶ್ರೇಷ್ಠತಮವಾದ ಮೌಲ್ಯವಿದೆ.

ಭಾರತೀಯ ದರ್ಶನಗಳನ್ನು ಅವಲೋಕಿಸಿದಾಗ ಆ ಮೌಲ್ಯವು ಮೋಕ್ಷ, ಮುಕ್ತಿ ಅಂದರೆ ಆತ್ಮಸಾಧನೆ ಎಂದು ಕರೆಸಿಕೊಳ್ಳುತ್ತದೆ. ಆದರೆ ಆ ಆತ್ಮಸಾಧನೆಯು ಅಷ್ಟು ಸುಲಭವೂ ಅಲ್ಲ, ಅದು ಶೀಘ್ರವಾಗಿ ದೊರಕುವುದೂ ಇಲ್ಲ. ಹರಿವ ನದಿಯು ತನ್ನ ಉಗಮಸ್ಥಾನದಿಂದ ಸಾಗರವನ್ನು ಸೇರುವವರೆಗೆ ಬೆಟ್ಟಗುಡ್ಡಗಳನ್ನು, ಕಾಡುಮೇಡುಗಳನ್ನು ಗ್ರಾಮನಗರಗಳನ್ನು ಸುತ್ತುವರೆಯುತ್ತ, ನಾನಾ ವಿಧವಾದ ಅಲೆದಾಟಗಳಿಂದ ಮುಂದುವರೆದು, ಕಟ್ಟಕಡೆಗೆ ಸಮುದ್ರವನ್ನು ಸೇರುತ್ತದೆ. ಹಾಗೆಯೇ ಮಾನವ ಜೀವನವೂ ಹಲವಾರು ಜನ್ಮಗಳನ್ನು ತಳೆದು ನೂರಾರು ರೀತಿಯ ಅನುಭವಗಳಿಗೆ ಸಿಕ್ಕಿ ಸವೆದು, ಕಟ್ಟಕಡೆಗೆ ಮೋಕ್ಷಕ್ಕೆ ಸಲ್ಲುತ್ತದೆ.

ಮಾನವಶರೀರವು ಭೋಗಾಯತನವೂ ಹೌದು, ಯೋಗಾಯ–ತನವೂ ಹೌದು. ಅದು ಪ್ರೇಯಸ್ಸು (ಲೌಕಿಕ ಸಮೃದ್ಧಿ) ಮತ್ತು ಶ್ರೇಯಸ್ಸು (ಮುಕ್ತಿ) – ಈ ಎರಡನ್ನೂ ಅಪೇಕ್ಷಿಸುತ್ತದೆ. ಪ್ರೇಯಸ್ಸಿಗಾಗಿ ಧರ್ಮ, ಅರ್ಥ ಮತ್ತು ಕಾಮಗಳೆಂಬ ಮೂರು ಮೌಲ್ಯಗಳು ಮತ್ತು ಶ್ರೇಯಸ್ಸಿಗಾಗಿ ಮೋಕ್ಷ ಎಂಬ ಅತ್ಯುಚ್ಚ ಮೌಲ್ಯವನ್ನು ನಮ್ಮ ಶಾಸ್ತ್ರಗ್ರಂಥಗಳು ವಿಧಿಸಿವೆ.

## ಧರ್ಮ ಎಂದರೇನು?

ಧರ್ಮ ಎಂದರೇನು? ಪ್ರತಿಯೊಂದು ಜೀವಿಯೂ ಅತ್ಯಂತ ಕಿರಿದಾದ ಕೀಟದಿಂದ ಮಾನವನವರೆಗೆ, ದುಃಖದಿಂದ ಬಿಡುಗಡೆಯನ್ನು ಹೊಂದಲು, ಸುಖವನ್ನು ಸಂಪಾದಿಸಲು ಹಾತೊರೆಯುತ್ತಿರುತ್ತದೆ. ಈ ಕಷ್ಟದಿಂದ ಬಿಡುಗಡೆಗೆ, ಸುಖದ ಸಂಪಾದನೆಗೆ ಮಾನವನು ತನ್ನ ಆಯುಷ್ಯವನ್ನೆಲ್ಲಾ ವ್ಯಯಮಾಡುತ್ತಾನೆ. ಆದರೆ ಆತನು ಈ ಪ್ರಯತ್ನದಲ್ಲಿ ಸಾಫಲ್ಯಕ್ಕಿಂತಲೂ ವೈಫಲ್ಯವನ್ನೇ ಹೆಚ್ಚಾಗಿ ಕಾಣುತ್ತಾನೆ. ಏಕೆ? ಅವನ ಪ್ರಯತ್ನದಲ್ಲಿ ಲೋಪವೂ, ಅವನ ಸಾಧನೆಗಳಲ್ಲಿ ದೋಷವೂ ಇರುತ್ತವೆ. ಅವೇ ಅವನ ಧ್ಯೇಯಸಾಧನೆಯಲ್ಲಿ ಅಡ್ಡಿಯಾಗುತ್ತವೆ. ಅವನು ಹೇಗೆ ಸಾಗಿದರೆ ಒಳ್ಳೆಯದು, ಹೇಗೆ ಸಾಗಬಾರದು ಎಂಬುದನ್ನು ತಿಳಿಸಿಕೊಡುವುದೇ ಧರ್ಮ, ಎಂದರೆ ಮಾನವನ ನಿತ್ಯಜೀವನಕ್ಕೆ ಮತ್ತು ಪರಮಾರ್ಥ ಜೀವನಕ್ಕೆ ಅಗತ್ಯವಾದ ವಿಧಿನಿಯಮಗಳನ್ನು ತಿಳಿಸಿಕೊಡುವುದೇ ಧರ್ಮ. ಇಹಜೀವನದಲ್ಲಿ ತೃಪ್ತಿ ನೆಮ್ಮದಿಗಳನ್ನು ಪಡೆಯಲು ಮತ್ತು ಪರಮಾರ್ಥಕ್ಕೆ ಮುಕ್ತಿಯನ್ನು ಸಾಧಿಸಿಕೊಳ್ಳಲು ಮಾನವನು ಅನುಸರಿಸಬೇಕಾದ ಮಾರ್ಗಸೂಚಿಯೇ ಧರ್ಮ. ಧರ್ಮವೆಂದರೆ ಜೀವನದ ನೀತಿಸೂತ್ರಗಳು; ಇಹದಲ್ಲಿ ಪ್ರೇಯಸ್ಸಿಗೆ, ಪರದಲ್ಲಿ ಶ್ರೇಯಸ್ಸಿಗೆ ದಾರಿ ತೋರುವ ದಿಕ್ಸೂಚಿ.

## ಜೀವನದಲ್ಲಿ ಅರ್ಥ, ಕಾಮಗಳ ಸ್ಥಾನ

ಅರ್ಥ ಮತ್ತು ಕಾಮಗಳು ಇಹದಲ್ಲಿ ಪ್ರೇಯಸ್ಸಿಗೆ ಅಗತ್ಯವಾಗಿರುವ ಮೌಲ್ಯಗಳು. ಇವುಗಳ ಸಂಪಾದನೆ ಹೇಗೆ? ಅದು ಧರ್ಮದ ಮೂಲಕವೇ ಆಗಬೇಕು. ಪ್ರತಿಯೊಬ್ಬನೂ ಅವನವನಿಗೆ ವಿಹಿತವಾದ ಕರ್ಮವನ್ನೂ ಉದ್ಯೋಗವನ್ನೂ ಮಾಡುತ್ತ, ಅರ್ಥ ಎಂದರೆ ತನ್ನ ಜೀವನನಿರ್ವಹಣೆಗೆ ಆವಶ್ಯಕವಾದ ಧನವನ್ನು ಸಂಪಾದಿಸಬೇಕು.

ಯಲ್ಲಭಸೇ ನಿಜಕರ್ಮೋಪಾತ್ತಂ
ವಿತ್ತಂ ತೇನ ವಿನೋದಯ ಚಿತ್ತಂ

ಇದು ಶ್ರೀಶಂಕರಾಚಾರ್ಯರ ಮಾತು. **ನ್ಯಾಯರೀತಿಯ ದುಡಿಮೆಯಿಂದ ಸಂಪಾದಿಸಿದ ಹಣದಿಂದ ತೃಪ್ತನಾಗಿರು ಎಂದು ಇದರ ತಾತ್ಪರ್ಯ**. ಅರ್ಥದ ಬಳಿಕ ಮುಂದಿನ ಮೌಲ್ಯ **ಕಾಮ**. ಕಾಮವೆಂದರೆ ಆಸೆಗಳು. ಇವುಗಳನ್ನು ಪೂರ್ಣವಾಗಿ ತೃಪ್ತಿಪಡಿಸುವುದು ಎಂದೆಂದಿಗೂ ಸಾಧ್ಯವಿಲ್ಲ. ಯಾವ ಆಸೆಯು ಧರ್ಮದ ಆಧಾರವುಳ್ಳದ್ದೋ, ಅದನ್ನು ಬಯಸುವುದು ತಪ್ಪಲ್ಲ. ಧರ್ಮಕ್ಕೆ ವಿರುದ್ಧವಾದ ಬಯಕೆಗಳು ಮಾನವನನ್ನು ದಾರಿತಪ್ಪಿಸುತ್ತವೆ.

ವ್ಯಾವಹಾರಿಕ ಪ್ರಪಂಚದಲ್ಲಿ ಜೀವನ ನಡೆಸಲು ಆಹಾರ, ಬಟ್ಟೆ, ವಸತಿ ಇತ್ಯಾದಿ ಮೂಲ ಸೌಕರ್ಯಗಳು ಎಲ್ಲರಿಗೂ ಅತ್ಯಾವಶ್ಯಕ. ಇವುಗಳನ್ನು ಗಳಿಸಲು ದುಡಿಮೆಯು, ಅದು ಶಾರೀರಿಕವಾಗಲಿ ಅಥವಾ ಬೌದ್ಧಿಕವಾಗಲಿ, ಬೇಕೇ ಬೇಕು. ಪ್ರಾಣಿಗಳು ಮೇಲಿನ ಕನಿಷ್ಠ ಸೌಕರ್ಯಗಳನ್ನು ಪಡೆದು ತೃಪ್ತವಾಗುತ್ತವೆ. ಆದರೆ, ಮಾನವನು ಅಷ್ಟಕ್ಕೆ ಎಂದೂ ತೃಪ್ತನಾಗುವುದಿಲ್ಲ. ಅವನು ಆಸೆಗಳ ಆಮಿಷಕ್ಕೆ ಸಿಲುಕಿ, ಅವುಗಳನ್ನು ಗಳಿಸಿಕೊಳ್ಳಲು ಶ್ರಮಿಸುತ್ತಾನೆ. ತನ್ನ ನಿರೀಕ್ಷೆಯಂತೆ ಪ್ರಯತ್ನಗಳು ಫಲ ನೀಡದಿದ್ದಾಗ, ಕೋಪ ಮತ್ಸರ ಅಸೂಯೆಗಳಿಗೆ ಒಳಗಾಗುತ್ತಾನೆ. ಈ ಆಸೆ ಅಥವಾ ಕಾಮ ಎಂಬುದು ಮಾನವನ ಮನಸ್ಸಿನ ಅತ್ಯಂತ ದುಷ್ಟ ಕಶ್ಮಲವಾಗಿ ಪರಿಣಮಿಸುತ್ತದೆ. ಅವನು ಕರ್ಮ ಮಾಡಿದಷ್ಟೂ ಅವನ ಆಸೆಯು ಬೆಳೆಯುತ್ತಾ, ದುರಾಸೆಯಾಗಿ ಮಾರ್ಪಟ್ಟು, ಅವನು ಲೌಕಿಕ ಸಮೃದ್ಧಿ ಅಂದರೆ ಪ್ರೇಯಸ್ಸಿನಿಂದಲೂ ತೀರಾ ದೂರಕ್ಕೆ ಸರಿಯುತ್ತಾನೆ.

ಆದ್ದರಿಂದಲೇ ಶಾಸ್ತ್ರಗಳು ಅರ್ಥ ಕಾಮಗಳನ್ನು, ಧರ್ಮದ ಎಲ್ಲೆಕಟ್ಟುಗಳನ್ನು ಮೀರದೆ ಸಂಪಾದಿಸಬೇಕು, ಇಹಜೀವನದಲ್ಲಿ ತೃಪ್ತಿ ಸಮಾಧಾನಗಳನ್ನು ಗಳಿಸಿ, ಪಾರಮಾರ್ಥಿಕ ಜೀವನದ ಪಥವನ್ನು

---

*ಲೇಖಕರು ಶಾಸ್ತ್ರವಿಚಾರಗಳಲ್ಲಿ ಘನವಿದ್ವಾಂಸರು. ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಮೈಸೂರು ನಿವಾಸಿಗಳು.*

ಸುಗಮಗೊಳಿಸಬೇಕು ಎಂದು ಪದೇ ಪದೇ ಸಾರುತ್ತವೆ. ಮಾನವ ಜೀವನದ ಎಲ್ಲಾ ದುರಂತಗಳಿಗೂ ಈ ಅರ್ಥ ಕಾಮಗಳೇ ಕಾರಣ. ಇವನ್ನು ಗೆದ್ದವನಿಗೆ ಮೋಕ್ಷಪಥವು ಸ್ಪಷ್ಟವಾಗಿ ತೋರುತ್ತದೆ. ಇದೇ ನಮ್ಮ ಶಾಸ್ತ್ರಗ್ರಂಥಗಳ, ಹಿರಿಯರ ಉಪದೇಶ.

### ಮೋಕ್ಷವೇ ಜೀವನದ ಆದರ್ಶ

ಮೋಕ್ಷ ಎಂದರೇನು? ಸತತವಾಗಿ ನಮ್ಮನ್ನು ಕಾಡುತ್ತಿರುವ ಕಷ್ಟದುಃಖಗಳಿಂದ ಬಿಡುಗಡೆ ಪಡೆಯುವುದನ್ನೇ ಮೋಕ್ಷವೆಂದು ಕರೆಯುತ್ತಾರೆ. ನಾವು ಈ ಜೀವನದಲ್ಲಿ ಪಡೆಯಬಹುದಾದ ಅತ್ಯಂತ ಶ್ರೇಷ್ಠ ಮತ್ತು ಗರಿಷ್ಠವಾದ ಸುಖವೇ ಇಂದ್ರಿಯಾತೀತ ಸುಖ. ಅದನ್ನು ತಂದುಕೊಡುವುದೇ ಮೋಕ್ಷ ಅಥವಾ ಮುಕ್ತಿ.

ಈ ಮುಕ್ತಿಗಾಗಿ ಅಗತ್ಯವಾದುದು ಜ್ಞಾನಾರ್ಜನೆ. ಭಕ್ತಿ, ಕರ್ಮ ಮತ್ತು ಯೋಗಗಳು ಈ ಜ್ಞಾನವನ್ನು ಪಡೆಯಲು ಪೂರ್ವಸಿದ್ಧತೆಯನ್ನು ಒದಗಿಸಿಕೊಡುತ್ತವೆ. ಚಿತ್ತಶುದ್ಧಿಯನ್ನು ಪಡೆಯಲು ನೆರವಾಗುವ ಸಾಧನ ಪಥಗಳು ಅವು. ಈ ಮೋಕ್ಷಸಾಧನೆಗೆ ನಾಲ್ಕು ಅರ್ಹತೆಗಳನ್ನು ಹೊಂದಿರಬೇಕೆಂದು ಶ್ರೀಶಂಕರಾಚಾರ್ಯರು ಬೋಧಿಸಿದ್ದಾರೆ. **ನಿತ್ಯಾನಿತ್ಯ ವಸ್ತು ವಿವೇಕ, ಇಹಲೋಕ ಮತ್ತು ಪರಲೋಕಗಳಲ್ಲಿ ದೊರಕುವ ಫಲಗಳಲ್ಲಿ ಅನಾಸಕ್ತಿ, ಶಮದಮಾದಿ ಷಟ್ ಸಂಪತ್ತು ಮತ್ತು ಮುಮುಕ್ಷುತ್ವ** – ಈ ನಾಲ್ಕು ಅರ್ಹತೆಗಳಿದ್ದಲ್ಲಿ ಆತ್ಮಸಾಧನೆಗೆ ತೊಡಗಬಹುದು.

ಪ್ರತಿನಿತ್ಯವೂ ನಾನಾ ಬದಲಾವಣೆಗಳಿಗೆ ಒಳಗಾಗಿ, ನಾಶವಾಗುವ ಈ ಜಗತ್ತು ಮತ್ತು ಅದರಲ್ಲಿ ನೆಲೆಸಿರುವ ಜೀವರಾಶಿಗಳು ನಿತ್ಯವೇ ಅಥವಾ ಇವಕ್ಕೆಲ್ಲಾ ಕಾರಣವಾದ ತ್ರಿಕಾಲಾಬಾಧಿತವಾದ ಆತ್ಮವಸ್ತು ನಿತ್ಯವೇ ಎಂಬುದನ್ನು ಆತ್ಮಸಾಧನೆ ಮಾಡುವವನು ದೃಢಪಡಿಸಿಕೊಳ್ಳಬೇಕು. ಫಲಗಳ ಆಸೆಯಿಂದ ತಾನು ಮಾಡುತ್ತಿರುವ ಕರ್ಮಗಳ ಫಲಗಳನ್ನು ತ್ಯಾಗ ಮಾಡಬೇಕು. ಅಂತರಂಗ ಮತ್ತು ಬಹಿರಂಗ ಇಂದ್ರಿಯಗಳ ಮೇಲೆ ಹತೋಟಿ ಹೊಂದಿರಬೇಕು. ಇಲ್ಲಿ ಅಂತರಂಗ ಇಂದ್ರಿಯವೆಂದರೆ ಮನಸ್ಸು, ಬಹಿರಂಗ ಇಂದ್ರಿಯಗಳೆಂದರೆ, ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು. ಅಂತಿಮವಾಗಿ ಸಾಧಕನು ಪ್ರಾಮಾಣಿಕವಾಗಿ ಮೋಕ್ಷಾಪೇಕ್ಷಿಯಾಗಿರಬೇಕು. ಇದಿಷ್ಟೂ ಇದ್ದಲ್ಲಿ ಆತನು ಬ್ರಹ್ಮ–ಆತ್ಮ ಜಿಜ್ಞಾಸೆಗೆ ಅರ್ಹತೆ ಪಡೆದು, ಜ್ಞಾನ ಮಾರ್ಗದಲ್ಲಿ ಸಾಧನೆ ನಡೆಸಬಹುದು.

ಹುಟ್ಟುವ, ಸಾಯುವ, ಸದಾ ಬದಲಾವಣೆಗಳಿಗೆ ಒಳಗಾಗುವ ಈ ಜಗತ್ತು ಮತ್ತು ಜೀವರಾಶಿಗಳು ಸತ್ಯವಲ್ಲ, ಬ್ರಹ್ಮವೊಂದೇ ಸತ್ಯವೆಂಬ ಅರಿವು ದೃಢವಾದಾಗ, ಸಾಧಕನಿಗೆ ಜಗತ್ತಿನ ಆಸೆ ಆಮಿಷಗಳ ಪ್ರಲೋಭನೆ ಉಂಟಾಗುವುದಿಲ್ಲ. ಆತನು ಗುರುವಿನ ಅನುಗ್ರಹದಿಂದ ಸಾಧನಾಪಥದಲ್ಲಿ ಮುಂದುವರೆಯುತ್ತಾನೆ; ಆತ್ಮವಸ್ತುವನ್ನು ಅನುಭವಕ್ಕೆ ತಂದುಕೊಳ್ಳುತ್ತಾನೆ.

ಈ ಸೃಷ್ಟಿ , ಇದರಲ್ಲಿಯ ಜೀವರಾಶಿಗಳು, ಇವಕ್ಕೆಲ್ಲಾ ಕಾರಣವಾದ ಈಶ್ವರ – ಈ ಎಲ್ಲಾ ಬ್ರಹ್ಮವೇ ಎಂಬ ಸತ್ಯವನ್ನು ಆಗ ಸಾಧಕನು ಅರಿಯುತ್ತಾನೆ, ಆತ್ಮತತ್ತ್ವದಲ್ಲಿ ನೆಲೆನಿಲ್ಲುತ್ತಾನೆ. ಇದೇ ಜೀವನದ ಪರಮೋಚ್ಚ ಮೌಲ್ಯ. ಇದನ್ನೇ ಮೋಕ್ಷ ಸ್ಥಿತಿ ಎನ್ನುವುದು. ✪

## ಸ್ನೇಹಪ್ರಭ

**ಇತರರು ತೆಗಳುವುದನ್ನು, ಹೀಯಾಳಿಸುವುದನ್ನು ಹೇಗೆ ಸ್ವೀಕರಿಸಬೇಕು?**

**"ಹೊಗಳುವುದು, ತೆಗಳುವುದು, ಉಗುಳುವುದು ಎಲ್ಲವೂ ತೊಲಗುವುದು ಆ ದಿವ್ಯ ನೆಲೆಯಲ್ಲಿ ನೋಡಾ."**
**– ಅಕ್ಕಮಹಾದೇವಿ.**

ಅದನ್ನು ಸ್ವೀಕರಿಸಲೇಬಾರದು. ಬುದ್ಧನು ಭಿಕ್ಷೆ ಬೇಡುತ್ತಿದ್ದನು. ಆ ಸಂದರ್ಭದಲ್ಲಿ ಒಂದು ಮನೆಯ ಯಜಮಾನನು ಬುದ್ಧನನ್ನು ಬಾಯಿಗೆ ಬಂದಂತೆ ಬೈದನು. ಅವನ ಬೈಗಳ ಆತಿಥ್ಯ ಮುಗಿದ ಮೇಲೆ ಬುದ್ಧನು ಅವನನ್ನು ಕುರಿತು ಕೇಳಿದನು: "ಯಾರಾದರೂ ಏನಾದರೂ ನೀಡಿದುದನ್ನು ಸ್ವೀಕರಿಸದಿದ್ದರೆ ಅದು ಯಾರಿಗೆ ಸೇರುತ್ತದೆ?" "ನೀಡಿದವನಿಗೆ!" ಎಂದು ಉತ್ತರಿಸಿದನು ಯಜಮಾನ. ಅದಕ್ಕೆ ಬುದ್ಧ ಹೇಳಿದನು, "ಹಾಗಾದರೆ ನೀನು ನನಗೆ ನೀಡಿದ ಈ ಬೈಗಳನ್ನು ನಾನು ಸ್ವೀಕರಿಸುವುದಿಲ್ಲ." ಸೂರ್ಯನ ಕಡೆ ಉಗುಳಿದರೆ ಆ ಉಗುಳು ನಮ್ಮ ಮುಖದ ಮೇಲೆಯೇ ಬೀಳುತ್ತದೆಯಲ್ಲವೆ?

ಹೊಗಳಿಕೆ ಮತ್ತು ತೆಗಳಿಕೆ ಎರಡನ್ನೂ ನಾವು ಉದಾಸೀನಭಾವದಿಂದ ನೋಡಬೇಕು. ಹೊಗಳಿಕೆ ಬೇಕಾದರೆ ತೆಗಳಿಕೆಗೂ ನಾವು ಸಿದ್ಧರಾಗಿರಬೇಕು. ಹೊಗಳಿಕೆಗೆ ಉಬ್ಬಿ ತೆಗಳಿಕೆಗೆ ಕುಗ್ಗುವ ನಾವು ಬಾಹ್ಯ ಘಟನೆಗಳಿಗೆ ಎಷ್ಟೊಂದು ದಾಸರಾಗಿದ್ದೇವೆ! ಈ ದಾಸ್ಯ ನಮ್ಮನ್ನು ನಾಚಿಸಬೇಡವೆ? ಇದೊಂದು ದಯನೀಯ ಸ್ಥಿತಿಯಲ್ಲವೆ? ಆದ್ದರಿಂದ ನಿಂದಾಸ್ತುತಿಗಳನ್ನು ನಾವು ಮೀರಿಹೋಗಬೇಕು.

ಸಾಮಾನ್ಯವಾಗಿ ತೆಗಳುವವರು ನಮ್ಮ ದೋಷಗಳನ್ನೇ ಎತ್ತಿ ತೋರಿಸುತ್ತಿರುತ್ತಾರೆ. ನಮಗೆ ಈ ದೋಷಗಳ ಅರಿವಾಗಿ ಅವುಗಳನ್ನು ತಿದ್ದಿಕೊಳ್ಳಲು ಇದೊಂದು ಅವಕಾಶ. ನಮ್ಮನ್ನು ಇತರರು ತೆಗಳುವಾಗ ಒಳಗಡೆಯಿಂದ ಉಂಟಾಗುವ ಪ್ರತಿಕ್ರಿಯೆಗಳ ಆಧಾರದ ಮೇಲೆ ನಮ್ಮ ಸ್ಥಿತಿಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಈ ಸದವಕಾಶಗಳು ಎಲ್ಲರೂ ನಮ್ಮನ್ನು ಹೊಗಳುತ್ತಿದ್ದರೆ ಸಿಕ್ಕುವುದಿಲ್ಲ.

ಎಲ್ಲರನ್ನೂ ನಮ್ಮವರನ್ನಾಗಿ ಸ್ವೀಕರಿಸಬೇಕು. ಆಗ ತೆಗಳಿಕೆ ಒಂದು ದೊಡ್ಡ ದೋಷವಾಗಿ ಕಾಣುವುದಿಲ್ಲ. ನೋವಾದರೂ ಪ್ರತಿಕ್ರಿಯೆ ಇಲ್ಲದೆ ಒಪ್ಪಿಕೊಳ್ಳುತ್ತೇವೆ. ಹಿರಿಯರು ಹೇಳುವಂತೆ ಹಲ್ಲು ನಾಲಗೆಯನ್ನು ಕಚ್ಚಿದಾಗ ನಾವು ಹಲ್ಲಿಗೆ ಶಿಕ್ಷೆಯನ್ನು ವಿಧಿಸುವುದಿಲ್ಲ, ಅದನ್ನು ಬೈಯುವುದೂ ಇಲ್ಲ. ಹಲ್ಲುನಾಲಗೆಗಳಿಬ್ಬರೂ ನಮ್ಮವರೇ ಅಲ್ಲವೆ? ಆದ್ದರಿಂದಲೇ ಶ್ರೀಮಾತೆ ಶಾರದಾದೇವಿಯವರು **"ಎಲ್ಲರನ್ನೂ ನಮ್ಮವರನ್ನಾಗಿಸುವುದನ್ನು ಕಲಿತುಕೊ, ಯಾರೂ ಪರರಲ್ಲ"** ಎಂದು ಉಪದೇಶಿಸಿದುದು. (ಬರಹ: ಸ್ವಾಮಿ ನಿತ್ಯಸ್ಥಾನಂದ)